# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

**ದಿನಾಂಕ: 08.06.2023 ರಂದು ಅಪರಾಹ್ನ 3:30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 26ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | **ಪ್ರೊ. ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. |
| **ಪ್ರೊ. ಎನ್. ಲಕ್ಷ್ಮೀ**<br>ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷ**<br>ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು |
| **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. | **ಪ್ರೊ. ಎಂ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು),<br>ಕರಾಮುವಿ, ಮೈಸೂರು. |
| ವಿಶೇಷ ಆಹ್ವಾನಿತರು | |
| **ಡಾ. ನಿರಂಜನ್ ರಾಜ್ ಎಸ್**<br>CIQA **ನಿರ್ದೇಶಕರು,** ಕರಾಮುವಿ, ಮೈಸೂರು. | – |
| ವಿವಿಧ ನಿಕಾಯಗಳ (ಸ್ಕೂಲ್) ಪ್ರಭಾರ ನಿರ್ದೇಶಕರು | |
| **ಪ್ರೊ. ಎನ್. ಲಕ್ಷ್ಮೀ** | ಶಿಕ್ಷಣ ನಿಕಾಯ |
| **ಡಾ. ನಿರಂಜನ್ ರಾಜ್ ಎಸ್.** | ವಿಜ್ಞಾನ ನಿಕಾಯ |
| **ಡಾ. ಹೆಚ್. ರಾಜೇಶ್ವರಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಡಾ. ಮಹೇಶ ವಿ.** | ವಾಣಿಜ್ಯ ನಿಕಾಯ |
| **ಡಾ. ಆರ್.ಹೆಚ್. ಪವಿತ್ರ** | ಸಮಾಜ ವಿಜ್ಞಾನ ನಿಕಾಯ |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರ ಸೂಚನೆಯಂತೆ ಡೀನ್ (ಶೈಕ್ಷಣಿಕ) ರವರು ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು 26ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ನಂತರ ಕಾರ್ಯಸೂಚಿಯಂತೆ ವಿಷಯಗಳನ್ನು ಸಭೆಗೆ ಮಂಡಿಸಲಾಯಿತು.

**ವಿಷಯ ಸಂಖ್ಯೆ: 26.01**

**ವಿಷಯ: ಯುಜಿಸಿ ಮಾರ್ಗಸೂಚಿಗಳ ಅನುಸಾರ ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (3ನೇ ತಿದ್ದುಪಡಿ 2021)ರ ರೀತಿ ರಚಿಸಿಕೊಂಡು ಅದರ ನಿಯಮಾವಳಿಗಳಂತೆ ಪಿಹೆಚ್.ಡಿ. ಪ್ರವೇಶಾತಿ ಕಾರ್ಯಗಳನ್ನು ನಿರ್ವಹಣೆ ಮಾಡುತ್ತಿದ್ದು, ಯು.ಜಿ.ಸಿ ಹೊಸ ನಿಯಮಾವಳಿಗಳನ್ನು ಅಳವಡಿಸಿಕೊಂಡು ಅಧ್ಯಾದೇಶಗಳನ್ನು ತಿದ್ದುಪಡಿ ಮಾಡಿರುವ ಬಗ್ಗೆ.**

*****

ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (3ನೇ ತಿದ್ದುಪಡಿ 2021)ರಂತೆ ವಿಶ್ವವಿದ್ಯಾನಿಲಯದಲ್ಲಿ ಸದರಿ ಆಧ್ಯಾದೇಶದ ನಿಯಮಾವಳಿಗಳ ರೀತ್ಯಾ ಪಿಹೆಚ್.ಡಿ ಪ್ರವೇಶಾತಿ ಪ್ರಕ್ರಿಯೆಗಳನ್ನು ನಿರ್ವಹಣೆ ಮಾಡುತ್ತಿದ್ದು, ಇತ್ತೀಚಿನ ದಿನಗಳಲ್ಲಿ University Grants Commission Notification, New Delhi, 7th November 2022 ರಂದು UGC (Minimum Standards amd Procedures for Award for Ph.D. Degree) Regulation, 2022ರ ನಿಯಮಾವಳಿಗಳನ್ನು ಗೆಜೆಟ್ ಅಧಿಸೂಚನೆ ಹೊರಡಿಸಿದ್ದು, ಅದರ ಅನ್ವಯ ಕರಾಮುವಿ ಪಿಹೆಚ್.ಡಿ. ಆಧ್ಯಾದೇಶ

ಕುಲಸಚಿವರು

ಕುಲಪತಿಗಳು

2012 (3ನೇ ತಿದ್ದುಪಡಿ 2021)ರಲ್ಲಿ ತಿದ್ದುಪಡಿಗಳನ್ನು ಮಾಡಿ 4ನೇ ತಿದ್ದುಪಡಿ 2023ರಲ್ಲಿ UGC Ph.D Regulation, 2022ರ ನಿಯಮಾವಳಿಗಳ ವಿವರಗಳನ್ನು ಅಡಕಗೊಳಿಸುತ್ತಿರುವ ಕಾರ್ಯ ಪ್ರಗತಿಯಲ್ಲಿದ್ದು, ಕರಾಮುವಿ ಪಿಹೆಚ್.ಡಿ ಆಧ್ಯಾದೇಶ ತಿದ್ದುಪಡಿ ಉಪಸಮಿತಿಯ ಪ್ರಥಮ ಸಭೆಯನ್ನು ದಿನಾಂಕ: 17.02.2023ರಂದು ಕರೆದು ಕೆಲವು ವಿಷಯಗಳು ಚರ್ಚಿತವಾಗಿರುತ್ತದೆ.

ಮುಂದುವರೆದು, ದಿನಾಂಕ: 18-05-2023ರಂದು ಪಿಹೆಚ್.ಡಿ ಆಧ್ಯಾದೇಶ ತಿದ್ದುಪಡಿ ಉಪಸಮಿತಿಯ ದ್ವಿತೀಯ ಸಭೆಯನ್ನು ಹಮ್ಮಿಕೊಂಡು ಸದರಿ ಸಭೆಯಲ್ಲಿ ಯಾವ ವಿಷಯಗಳನ್ನು ತೆಗೆಯಬೇಕು ಮತ್ತು ಯಾವ ವಿಷಯಗಳನ್ನು ನಿಯಮಾನುಸಾರಗಳನ್ವಯ ಅಡಕಗೊಳಿಸಬೇಕೆಂಬ ಬಗ್ಗೆ ಚರ್ಚಿಗೊಂಡು ಆ ವಿಷಯಗಳನ್ನು ಮಾತ್ರ ಅಡಕಗೊಳಿಸಿ ಕೆಲವು ಕಡೆ ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ. ಈಗಾಗಲೇ ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (4ನೇ ತಿದ್ದುಪಡಿ 2023)ರಲ್ಲಿ Regulation, 2022ರ ನಿಯಮಾವಳಿಗಳನ್ನು ಸೇರಿಸಿ, ಕೆಲವು ಅಂಶಗಳನ್ನು ತಿದ್ದುಪಡಿ ಮಾಡಿ ಅಂತಿಮಗೊಳಿಸಿ ಖಾಲಿ ಇರುವ ಸೀಟುಗಳಿಗೆ ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ಆಧ್ಯಾದೇಶದ ರೀತ್ಯಾ ಕ್ರಮವಹಿಸಬೇಕಾಗಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಒಳಗೊಂಡ ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (4ನೇ ತಿದ್ದುಪಡಿ 2023) ಅನ್ನು ದಿನಾಂಕ: 08-06-2023ರಂದು ಜರುಗುವ ಶೈಕ್ಷಣಿಕ ಮಂಡಳಿ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ಅನುಮೋದನೆಗೆ ವಿಷಯವನ್ನು ಮಂಡಿಸಲಾಗಿದೆ.

<u>ಚರ್ಚೆ:-</u>

ಪಿಹೆಚ್.ಡಿ. ಕಾರ್ಯಕ್ರಮವು ವಿಶ್ವವಿದ್ಯಾನಿಲಯದ ಅತ್ಯಂತ ಪ್ರತಿಷ್ಠಿತ ಕಾರ್ಯಕ್ರಮವಾಗಿದ್ದು ಅದರ ಗುಣಮಟ್ಟದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ ಎಂದು ಕುಲಪತಿಗಳು ತಿಳಿಸಿದರು. ಡಾ. ರಾಜೇಶ್ವರಿ ರವರು ಮಾತನಾಡಿ ಪ್ರಸ್ತುತ ಯುಜಿಸಿ ಪಿಹೆಚ್.ಡಿ. ನಿಯಮಾವಳಿ 2022ರ ಅನ್ವಯ ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (4ನೇ ತಿದ್ದುಪಡಿ 2023) ಮಾಡಿರುವ ಬದಲಾವಣೆಗಳನ್ನು ತಿಳಿಸಿದರು. ಯುಜಿಸಿ ಪಿಹೆಚ್.ಡಿ. ನಿಯಮಾವಳಿ 2022ರ ಅನ್ವಯ ಸಂಶೋಧನಾ ವಿದ್ಯಾರ್ಥಿಯು ನಿಯತಕಾಲಿಕೆಗಳಲ್ಲಿ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದು ಕಡ್ಡಾಯವಾಗಿರುವುದಿಲ್ಲ ಎಂಬ ಅಂಶವನ್ನು ಅವಗಾಹನೆಗೆ ತಂದರು. ಮಾನ್ಯ ಕುಲಪತಿಗಳು ಮಾತನಾಡಿ ಸಂಶೋಧನಾ ವಿದ್ಯಾರ್ಥಿಯು ತಾನು ನಡೆಸಿರುವ ಸಂಶೋಧನೆ ಬಗ್ಗೆ ಸಮ್ಮೇಳನಗಳಲ್ಲಿ ಪತ್ರಿಕೆಗಳನ್ನು ಮಂಡಿಸಿದಾಗ ಹಾಗೂ ಪ್ರತಿಷ್ಠಿತ ಸಂಶೋಧನಾ ನಿಯತಕಾಲಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದಾಗ ಸಿಗುವ ಪ್ರತಿಕ್ರಿಯೆಗಳು ಪಿಹೆಚ್.ಡಿ. ಸಂಶೋಧನೆ ಗುಣಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

**ತೀರ್ಮಾನ : ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (4ನೇ ತಿದ್ದುಪಡಿ 2023)ಅನ್ನು ಅನುಮೋದಿಸಲಾಯಿತು. ಮುಂದುವರೆದು, ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನೆಗೆ ಸಂಬಂಧಪಟ್ಟಂತೆ ಯಾವುದಾದರು ಎರಡು ಸಮ್ಮೇಳನದಲ್ಲಿ ಪತ್ರಿಕೆಗಳನ್ನು ಮಂಡಿಸುವುದು ಹಾಗೂ ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಎರಡು ಪತ್ರಿಕೆಗಳನ್ನು ಪ್ರಕಟಿಸುವುದು ಕಡ್ಡಾಯಗೊಳಿಸಲು ತೀರ್ಮಾನಿಸಲಾಯಿತು.**

*****

**<u>ವಿಷಯ ಸಂಖ್ಯೆ: 26.02</u>**

**ವಿಷಯ: ಕರಾಮುವಿಯ 2023-24ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ. ಕಾರ್ಯಕ್ರಮಗಳಿಗೆ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಪ್ರವೇಶಾತಿಯನ್ನು ನಿಯಮಾನುಸಾರ ಜಾಹೀರಾತು ನೀಡಿ ಪ್ರವೇಶಾತಿ ಪ್ರಕ್ರಿಯೆನ್ನು ಮಾಡುವ ಬಗ್ಗೆ.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗವಾರು ಖಾಲಿ ಇರುವ ಪಿಹೆಚ್.ಡಿ ಸೀಟುಗಳಿಗೆ ಕರಾಮುವಿ ಪಿಹೆಚ್.ಡಿ. ಆಧ್ಯಾದೇಶ 2012 (3ನೇ ತಿದ್ದುಪಡಿ 2021)ರ ಅಡಿಯಲ್ಲಿ ನಿಯಮಾನುಸಾರ ಜಾಹೀರಾತು

ಕುಲಸಚಿವರು                                                                 ಕುಲಪತಿಗಳು

ನೀಡಿ, ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ, ಅರ್ಹ ವಿದ್ಯಾರ್ಥಿಗಳಿಗೆ ಹಾಗೂ UGC/UGC-CSIR, JRF Test/NET/GATE/GRE/M.Phil ನಲ್ಲಿ ಉತ್ತೀರ್ಣರಾಗಿದ್ದರೆ ಅವರುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡುವ ಬಗ್ಗೆ ಯುಜಿಸಿ ನಿಯಮಾವಳಿಗಳಲಿದ್ದು, ಅದರಂತೆ ಕ್ರಮವಹಿಸಿ, ನಿಯಮಾನುಸಾರ ಪ್ರವೇಶಾತಿ ಪ್ರಕ್ರಿಯೆಗಳನ್ನು ಕೈಗೊಂಡು ಅರ್ಹ ಅಭ್ಯರ್ಥಿಗಳಿಗೆ ತಾತ್ಕಾಲಿಕ ಪ್ರವೇಶಾತಿ ನೀಡುವ ಸಂಬಂಧ ಅನುಮೋದನೆ ಕೋರಲಾಗಿದೆ.

ಕರಾಮುವಿಯ ವಿವಿದ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ ಪಿಹೆಚ್.ಡಿ. ಸೀಟುಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಕರಾಮುವಿಯ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಹೆಸರು | ಖಾಲಿ ಇರುವ ಪಿಹೆಚ್.ಡಿ. ಸೀಟುಗಳ ವಿವರಗಳು |
|---|---|---|
| 1 | ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 06 |
| 2 | ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 01 (ವಿಕಲಚೇತನರು) |
| 3 | ತೆಲಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ | 02 |
| 4 | ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 02 |
| 5 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 01 |
| 6 | ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 04 |
| 7 | ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 01 |
| 8 | ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 01 |
| 9 | ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 01 |
| 10 | ಜೀವ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 02 |
| 11 | ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 02 |
| 12 | ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 01 |
| 13 | ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | 12 |
| | **ಖಾಲಿ ಇರುವ ಸೀಟುಗಳ ಸಂಖ್ಯೆ** | **36** |

ಸದರಿ ವಿಷಯವನ್ನು ದಿನಾಂಕ: 08-06-2023ರಂದು ಜರುಗುವ ಶೈಕ್ಷಣಿಕ ಮಂಡಳಿ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**ತೀರ್ಮಾನ : ಅನುಮೋದಿಸಲಾಯಿತು.**

*****

**ವಿಷಯ ಸಂಖ್ಯೆ: 26.03**

**ವಿಷಯ: ಡಾ. ಉಷಾ .ಸಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು. ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಬಗೆಗೆ.**

*****

ಡಾ. ಉಷಾ .ಸಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು. ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಮಾರ್ಗದರ್ಶಕರನ್ನಾಗಿ ಪರಿಗಣಿಸಲು ಮನವಿಯನ್ನು ದಿನಾಂಕ: 10-03-2023ರಂದು ಡೀನ್(ಶೈಕ್ಷಣಿಕ)ರವರಿಗೆ ಸಲ್ಲಿಸಿದ್ದು, ಸದರಿ ವಿವರಗಳನ್ನು ವಿಭಾಗದ ಪಿ.ಜಿ. ಬಿ.ಓ.ಎಸ್. ಸಭೆಯಲ್ಲಿ ಮಂಡಿಸಿ, ಕೈಗೊಂಡ ತೀರ್ಮಾನದ ನಡಾವಳಿಯೊಂದಿಗೆ ಸಲ್ಲಿಸಲು ತಿಳಿಸಲಾಗಿದೆ.

ಸದರಿಯವರು ಸಲ್ಲಿಸಿರುವ ಮನವಿಯಲ್ಲಿ ಸಂಶೋಧನಾ ಮಾರ್ಗದರ್ಶಕರಾಗಲು ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿರುತ್ತಾರೆ. (ಬಾವುಟ-'ಅ')

ಕುಲಸಚಿವರು ಕುಲಪತಿಗಳು

ಈ ಸಂಬಂಧ ದಿನಾಂಕ: 13-03-2023ರಂದು ನಡೆದ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯಲ್ಲಿ ಮಂಡಿಸಿ, ಕರಾಮುವಿ ಪಿಹೆಚ್.ಡಿ. ಅಧ್ಯಾದೇಶ 2012 (3ನೇ ತಿದ್ದುಪಡಿ 2021) ಮಾರ್ಗಸೂಚಿಗಳ ಪ್ರಕಾರ ಪಿಹೆಚ್.ಡಿ. ಮಾರ್ಗದರ್ಶಕರಾಗಲು ಅರ್ಹತಾ ನಿಯಮಗಳಲ್ಲಿ ಸೂಚಿಸಿರುವ ಮಾನದಂಡಗಳ ಅನುಸಾರ ಮಾರ್ಗದರ್ಶಕರಾಗಲು ಅರ್ಹರಾಗಿದ್ದಾರೆ ಎಂದು ಸಭೆಯು ನಿರ್ಣಯಿಸಿ ಶಿಫಾರಸ್ಸು ಮಾಡಿರುತ್ತದೆ. ಸದರಿ ನಡಾವಳಿ ಪ್ರತಿಯನ್ನು (ಬಾವುಟ-'ಆ') ನಲ್ಲಿ ಲಗತ್ತಿಸಲಾಗಿದೆ.

ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ವಿವರಗಳೊಂದಿಗೆ ಮುಂದಿನ ಕ್ರಮವಹಿಸಲು ದಿನಾಂಕ: 01-04-2023ರಂದು ಪಿ.ಜಿ. ಬಿ.ಓ.ಎಸ್ ಅಧ್ಯಕ್ಷರು ಪತ್ರವನ್ನು ಸಲ್ಲಿಸಿರುತ್ತಾರೆ.

ಈ ಮೇಲ್ಕಂಡ ವಿವರಗಳೊಂದಿಗೆ ದಿನಾಂಕ: 08-06-2023ರಂದು ಜರುಗುವ ಶೈಕ್ಷಣಿಕ ಮಂಡಳಿ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ಅನುಮೋದನೆಗೆ ವಿಷಯವನ್ನು ಮಂಡಿಸಲಾಗಿದೆ.

**ತೀರ್ಮಾನ : ಅನುಮೋದಿಸಲಾಯಿತು.**

*****

**ವಿಷಯ ಸಂಖ್ಯೆ: 26.04**

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ಕಾರ್ಯಕ್ರಮದ ಶುಲ್ಕ ಆಧ್ಯಾದೇಶವನ್ನು ಸರ್ಕಾರದ ಪತ್ರದನ್ವಯ ತಿದ್ದುಪಡಿಗಳನ್ನು ಮಾಡಿ ಮಂಡಿಸಿರುವ ಬಗ್ಗೆ.

ಉಲ್ಲೇಖ: 1) ಪತ್ರ ಸಂಖ್ಯೆ: ಕರಾಮುವಿ/ಡೀನ್(ಶೈ)/ಡಿಎಸಿ-8/2019-20, ದಿ: 27-02-2020.
2) ಪತ್ರ ಸಂಖ್ಯೆ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-1)ರವರ ಪತ್ರ ಸಂಖ್ಯೆ: ಇಡಿ 46 ಯುಓವಿ 2020, ದಿನಾಂಕ:17.04.23.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ **"ORDINANCE RELATING TO THE PRESCRIPTION OF FEE FOR PH.D. PROGRAMMES, 2019"** ರ ಜೊತೆಯಲ್ಲಿನ Annexure - Iನಲ್ಲಿ ವಿವಿಧ ರೀತಿಯ ಶುಲ್ಕಗಳನ್ನು ನಿಗದಿಪಡಿಸಿ ಅನುಮೋದನೆಗಾಗಿ ಕಳುಹಿಸಿಕೊಡಲಾಗಿತ್ತು. ನಂತರದ ದಿನಗಳಲ್ಲಿ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: ಇಡಿ 19 ಯುಓವಿ :2019, ದಿನಾಂಕ: 23-01-2020ರ ಪತ್ರದಲ್ಲಿ ಶುಲ್ಕವನ್ನು ರೂ.35,000/-ಗಳಿಗೆ ಮೀರದಂತೆ ನಿಗದಿಪಡಿಸಿ, ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿ, ಕರಡು ಆಧ್ಯಾದೇಶವನ್ನು ಅನುಮೋದನೆ ರಹಿತವಾಗಿ ಹಿಂದುರಿಗಿಸಲಾಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಸ್ಪಷ್ಟೀಕರಣವನ್ನು ಉಲ್ಲೇಖ(1)ರ ಪತ್ರದಲ್ಲಿ ನೀಡಲಾಗಿರುತ್ತದೆ. (ಬಾವುಟ-ಅ)

ಉಲ್ಲೇಖ(2)ರ ಪತ್ರದಲ್ಲಿ ಪಿಹೆಚ್.ಡಿ. ಶುಲ್ಕ ಕುರಿತಾಗಿ ಆಧ್ಯಾದೇಶವನ್ನು ಸಿದ್ಧಪಡಿಸಿ, ಕೆಲವು ಮಾರ್ಪಾಡುಗಳನ್ನು ತಿಳಿಸಿ, (ಬಾವುಟ-ಆ) ಪ್ರಸ್ತಾಪಿತ ಆಧ್ಯಾದೇಶವನ್ನು ಪರಿಷ್ಕರಿಸಿ ಸರ್ಕಾರಕ್ಕೆ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದೆಂದು ತಿಳಿಸಿರುವುದರಿಂದ ಪರಿಷ್ಕೃತ "KSOU Ordinance relating to the prescription of Ph.D. Programme fee 2023" ರ (ಬಾವುಟ-ಇ) ಜೊತೆಯಲ್ಲಿನ Annexure-Iಅನ್ನು ಸಿದ್ಧಪಡಿಸಿ, (ಬಾವುಟ-ಈ) ದಿನಾಂಕ: 08-06-2023 ರಂದು ಜರುಗುವ ಶೈಕ್ಷಣಿಕ ಮಂಡಳಿ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ಅನುಮೋದನೆಗೆ ವಿಷಯವನ್ನು ಮಂಡಿಸಲಾಗಿದೆ.

**ತೀರ್ಮಾನ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ "KSOU Ordinance relating to the prescription of Ph.D. Programme fee 2023" ಸರ್ಕಾರದ ಪತ್ರದನ್ವಯ ತಿದ್ದುಪಡಿಗಳನ್ನು ಅನುಮೋದಿಸಲಾಯಿತು. ಈ ಆಧ್ಯಾದೇಶವನ್ನು ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರದ ಮೂಲಕ ಕಳುಹಿಸಲು ತೀರ್ಮಾನಿಸಲಾಯಿತು.**

*****

ಕುಲಸಚಿವರು | ಕುಲಪತಿಗಳು

## ವಿಷಯ ಸಂಖ್ಯೆ: 26.05

**ವಿಷಯ :** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿವಿಧ ಭತ್ಯೆಗಳನ್ನು ನಿಗದಿಪಡಿಸುವ ಪರಿನಿಯಮಗಳನ್ನು ಅನುಮೊದಿಸುವ ಕುರಿತು. **(Karnataka State Open University (Conducting of Academic and Skill Development Programmes) Statutes, 2023)**

**ಉಲ್ಲೇಖ :** ಸರ್ಕಾರದ ಪತ್ರ ಸಂಖ್ಯೆ ಇಡಿ 12 ಯುಓವಿ 2022, ದಿನಾಂಕ: 25–04–2023.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ, ವಿವಿಧ ಭತ್ಯೆಗಳನ್ನು ನಿಗದಿಪಡಿಸುವ ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. (Statute Governing Conduct of Delivery of Academic and Skill Development Programmes) ಉಲ್ಲೇಖಿತ ಪತ್ರದ ಸದರಿ ಪರಿನಿಯಮದಲ್ಲಿ ಕೆಲವು ಲೋಪದೋಷವಿರುವುದಾಗಿ ಪಟ್ಟಿ ಮಾಡಿ ತಿಳಿಸಿರುತ್ತಾರೆ. ಅದರಂತೆ ತಿದ್ದುಪಡಿ ಮಾಡಿ **Karnataka State Open University (Conducting of Academic and Skill Development Programmes) Statutes, 2023**ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. ಒಪ್ಪಿದಲ್ಲಿ ಸರ್ಕಾರದ ಮೂಲಕ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಲಾಗುವುದು.

**ತೀರ್ಮಾನ : Karnataka State Open University (Conducting of Academic and Skill Development Programmes) Statutes, 2023ಅನ್ನು ಅನುಮೋದಿಸಲಾಯಿತು. ಈ ಅಧ್ಯಾದೇಶವನ್ನು ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರದ ಮೂಲಕ ಕಳುಹಿಸಲು ತೀರ್ಮಾನಿಸಲಾಯಿತು.**

*****

## ವಿಷಯ ಸಂಖ್ಯೆ: 26.06

**ವಿಷಯ:** ಡಾ.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು., ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಗೊಳಿಸುವ ಬಗ್ಗೆ.

ಉಲ್ಲೇಖ: No:ACE/KSOU/April 2023, ದಿನಾಂಕ: 06.04.2023

* * * * *

ಡಾ.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು., ಬಿ. ಎಡ್ ಕಲಿಕಾರ್ಥಿ ಸಹಾಯ ಕೇಂದ್ರವನ್ನು ದಿ:20.02.2019 ರಿಂದ ಜಾರಿಗೆ ಬಂದಂತೆ ಸ್ಥಾಪಿಸಲಾಗಿತ್ತು. ಆದರೆ ಸದರಿ ಕೇಂದ್ರದ ಪ್ರಾಂಶುಪಾಲರು/ ಸಂಯೋಜನಾಧಿಕಾರಿಗಳು, ಕಾಲೇಜಿನ ಆಡಳಿತ ಮಂಡಳಿಯು ಕೆಲವು ಕಾರಣಗಳನ್ನು ತಿಳಿಸಿ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಗೊಳಿಸಬೇಕೆಂದು ಉಲ್ಲೇಖಿತ ಪತ್ರದಲ್ಲಿ ಕೋರಿರುವ ಹಿನ್ನೆಲೆಯಲ್ಲಿ ಡಾ.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು., ಇಲ್ಲಿ ಸ್ಥಾಪಿಸಲಾಗಿರುವ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಗೊಳಿಸಿ ಈ ಕೇಂದ್ರದ ಬದಲಿಗೆ Al-Ameen College of Education, Bangalore., ನಲ್ಲಿ ಹೊಸದಾಗಿ ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸ್ಥಾಪಿಸುವ ಸಂಬಂಧದ ಪ್ರಸ್ತಾವನೆಗೆ ಶೈಕ್ಷಣಿಕ ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ : ಡಾ.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು., ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಗೊಳಿಸುವ ಬಗ್ಗೆ ತೀರ್ಮಾನಿಸಲಾಯಿತು. ಸದರಿ ಕೇಂದ್ರದ ಬದಲಿಗೆ Al-Ameen College of Education, Bangalore., ನಲ್ಲಿ ಹೊಸದಾಗಿ ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸ್ಥಾಪಿಸುವ ಸಂಬಂಧದ ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು.**

*****

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ : 26.07**

ವಿಷಯ:- ಕರಾಮುವಿಯ ವಿಶೇಷ ಕಲಿಕಾರ್ಥಿ ಸಹಾಯ ಕೇಂದ್ರ ELSC (Exclusive LearnerSupport Centre) ಗಳನ್ನಾಗಿ ಸ್ಥಾಪಿಸಲಾಗಿದ್ದು, . ಸದರಿ ಪ್ರಸ್ತಾವನೆಗೆ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಅನುಮೋದನೆ ಕೋರಿ.

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲು ಈ ಕೆಳಗೆ ಸೂಚಿಸಿರುವ ಸಂಸ್ಥೆಗಳನ್ನು ವಿಶೇಷ ಕಲಿಕಾರ್ಥಿ ಸಹಾಯ ಕೇಂದ್ರ ELSC (Exclusive Learner Support Centre) ಗಳನ್ನಾಗಿ ಸ್ಥಾಪಿಸಲಾಗಿದೆ.

I. Phemesoft in Association with IBM, Bangalore, ಈ ಸಂಸ್ಥೆಗೆ ಕೆಳಗಿನ ಶಿಕ್ಷಣ ಕ್ರಮಗಳನ್ನು ಪ್ರಾರಂಭಿಸಲು ಆದೇಶ ನೀಡಲಾಗಿದೆ.

1. Business Analytics add-on course for MBA students
   a. Skill Training Programme on Business Analytics (Existing MBA Students)
   b. Skill Training Programme on Business Analytics (New MBA Students)
2. Certificate Programme for Business Analytics

II. Universal Education, Bangalore, ಈ ಸಂಸ್ಥೆಯವರೊಂದಿಗೆ Skill Development Programmes regarding Employability Enhancement Training ವಿಷಯದಲ್ಲಿ ಕರಾಮುವಿ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾಯಕ್ರಮವನ್ನು ನೀಡುವ ಬಗ್ಗೆ ಅನುಮೋದನೆ ನೀಡಲಾಗಿದ್ದು, ಸದರಿಯವರಿಗೆ ಆದೇಶ ನೀಡುವ ಪ್ರಸ್ತಾವನೆಗೆ ಅನುಮೋದನೆ ಕೋರಿದೆ.

ಮೇಲಿನ ಎರಡೂ ಸಂಸ್ಥೆಗಳಾದ Phemesoft in Association with IBM, Bangalore ಮತ್ತು Universal Education, Bangalore, ಈ ಸಂಸ್ಥೆಗಳನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ: Phemesoft, Bangalore ಮತ್ತು Universal Education, Bangalore,ಈ ಎರಡು ಸಂಸ್ಥೆಗಳಿಗೆ ELSC (Exclusive Learner Support Centre) ಗಳೆಂದು ಪರಿಗಣಿಸಲು ಒಪ್ಪಲಾಯಿತು.**

*****

**ವಿಷಯ ಸಂಖ್ಯೆ : 26.08**

**ವಿಷಯ : ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಬಗ್ಗೆ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲಡೆ" ಎಂಬುದನ್ನು ಪಸರಿಸುವ ಸಂಬಂಧ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಕೇಂದ್ರಗಳಿಗೆ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ ಈಗಾಗಲೇ ಕ್ರಮವಹಿಸಲಾಗಿದ್ದು, 145 ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. 2023ರ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ನಡೆಯುವ ಸಂದರ್ಭದಲ್ಲಿ ಹೊಸ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಅಧಿಸೂಚನೆ ಹೊರಡಿಸಲಾಗಿದ್ದು, ಕಲಿಕಾರ್ಥಿ ಸಹಾಯ ಕೇಂದ್ರಗಳಾಗಿ ಬಯಸಿ ಬಂದ 38 ಶಿಕ್ಷಣ ಸಂಸ್ಥೆಗಳ ಅರ್ಜಿಗಳು ಸ್ವೀಕೃತವಾಗಿದ್ದವು. 38 ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಲು 04 ತಂಡಗಳನ್ನು ರಚಿಸಿ ಪರಿಶೀಲನೆಗಾಗಿ ಕಳುಹಿಸಿಕೊಡಲಾಗಿತ್ತು. ಸದರಿ ತಂಡಗಳು 31 ಕಲಿಕಾರ್ಥಿ ಸಹಾಯ

ಕುಲಸಚಿವರು

ಕುಲಪತಿಗಳು

ಕೇಂದ್ರಗಳನ್ನು ಗುರುತಿಸಿ ಶಿಫಾರಸ್ಸು ಮಾಡಿರುವ ಹಿನ್ನಲೆಯಲ್ಲಿ ಹೊಸದಾಗಿ 31 ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇದುವರೆಗೂ ಸ್ಥಾಪಿಸಲಾಗಿರುವ ಹಿಂದಿನ 145 ಕಲಿಕಾರ್ಥಿ ಸಹಾಯ ಕೇಂದ್ರಗಳು ಮತ್ತು 2023ನೇ ಸಾಲಿನ ಜನವರಿ ಆವೃತ್ತಿಯಲ್ಲಿ ಸ್ಥಾಪಿಸಲಾಗಿರುವ 31 ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವುದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ: 2023ನೇ ಸಾಲಿನ ಜನವರಿ ಆವೃತ್ತಿಯಲ್ಲಿ ಸ್ಥಾಪಿಸಲಾಗಿರುವ 31 ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಕಾರ್ಯಕ್ಕೆ ಅನುಸಮರ್ಥನೆ ನೀಡಲಾಯಿತು. ಇಂತಹ ಕಲಿಕಾ ಸಹಾಯ ಕೇಂದ್ರಗಳ ಮೂಲಕ ವಾರ್ಷಿಕ ಕನಿಷ್ಠ 100 ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯದಿದ್ದಲ್ಲಿ ಅಂತಹ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ರದ್ದುಗೊಳಿಸಲು ತೀರ್ಮಾನಿಸಲಾಯಿತು.**

*****

**<u>ವಿಷಯ ಸಂಖ್ಯೆ : 26.09</u>**

ವಿಷಯ : ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಅರ್ಜಿ ಸಲ್ಲಿಸಿರುವ ಶಿಕ್ಷಣ ಸಂಸ್ಥೆಗಳಲ್ಲಿ ಅಗತ್ಯ ಮೂಲ ಸೌಲಭ್ಯಗಳನ್ನು ಹೊಂದಿರದೇ ಇರುವ ಶಿಕ್ಷಣ ಸಂಸ್ಥೆಗಳ ಠೇವಣಿ ಹಣವನ್ನು ಹಿಂದಿರುಗಿಸುವ ಬಗೆಗೆ.

******

2020–21 ಮತ್ತು 2022–23ನೇ ಸಾಲಿನಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪಡೆಯಲು ಅರ್ಜಿ ಸಲ್ಲಿಸಿದ ಶಿಕ್ಷಣ ಸಂಸ್ಥೆಗಳಲ್ಲಿ, ಶೈಕ್ಷಣಿಕ ಗುಣಮಟ್ಟ, ಅಗತ್ಯ ಮೂಲಭೂತ ಸೌಕರ್ಯಗಳನ್ನು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲಕರವಲ್ಲದ ಶಿಕ್ಷಣ ಸಂಸ್ಥೆಗಳ ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು, ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಮುಂಗಡವಾಗಿ ಶಿಕ್ಷಣ ಸಂಸ್ಥೆಗಳಿಂದ ಪಡೆಯಲಾಗಿದ್ದ ಠೇವಣಿ ಮೊತ್ತದಲ್ಲಿ ವಿಶ್ವವಿದ್ಯಾನಿಲಯದ ಸೇವಾ ಶುಲ್ಕವನ್ನು ಕಡಿತಗೊಳಿಸಿ ಉಳಿದ ಮೊತ್ತವನ್ನು ಸಂಬಂಧಿಸಿದ ಆಯಾ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು/ ಪ್ರಾಂಶುಪಾಲರು/ಕಾರ್ಯದರ್ಶಿಗಳಿಗೆ ಹಿಂದಿರುಗಿಸುವ ಸಂಬಂಧದ ಪ್ರಸ್ತಾವನೆಗೆ ಅನುಮೋದನೆ ಕೋರಿದೆ.

| | |
|---|---|
| 2020–21ನೇ ಸಾಲು | 31 |
| 2022–23ನೇ ಸಾಲು | 01 |

**ತೀರ್ಮಾನ : ಕಲಿಕಾರ್ಥಿ ಸಹಾಯಕ ಕೇಂದ್ರಗಳಿಗಾಗಿ ಅರ್ಜಿಸಲ್ಲಿಸಿ, ಅಗತ್ಯ ಮೂಲ ಸೌಲಭ್ಯಗಳನ್ನು ಹೊಂದಿರದ ಶಿಕ್ಷಣ ಸಂಸ್ಥೆಗಳ ಠೇವಣಿ ಹಣವನ್ನು ಹಿಂದಿರುಗಿಸಲು ಅನುಮೋದಿಸಲಾಯಿತು.**

*****

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ :26.10

**ವಿಷಯ: 2023–24 ನೇ ಶೈಕ್ಷಣಿಕ ಸಾಲಿನಿಂದ M.A Urdu ಶಿಕ್ಷಣಕ್ರಮವನ್ನು CBCS Mode ನಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.**

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2023–24 ನೇ ಶೈಕ್ಷಣಿಕ ಸಾಲಿನಿಂದ **M.A Urdu** ಶಿಕ್ಷಣಕ್ರಮಕ್ಕೆ **CBCS** ಮಾದರಿಯನ್ನು ಅಳವಡಿಸಿಕೊಳ್ಳುವ ಸಂಬಂಧ ದಿನಾಂಕ: 16–09–2022 ಮತ್ತು 17–09–2022 ರಂದು ನಡೆದ **UG / PG (Composite)** ಅಧ್ಯಯನ ಮಂಡಳಿ ಸಭೆಯಲ್ಲಿ **I, II, III, & IV** ನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ಸಿದ್ಧಪಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಪಠ್ಯಕ್ರಮವನ್ನು **BOS** ನಡಾವಳಿಯೊಂದಿಗೆ ಶೈಕ್ಷಣಿಕ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : 2023–24ನೇ ಶೈಕ್ಷಣಿಕ ಸಾಲಿನಿಂದ M.A Urdu ಶಿಕ್ಷಣಕ್ರಮವನ್ನು CBCS Mode ನಲ್ಲಿ ಅಳವಡಿಸಿಕೊಳ್ಳಲು ಅನುಮೋದಿಸಲಾಯಿತು.**

*****

<u>ವಿಷಯ ಸಂಖ್ಯೆ: 26.11</u>

**ವಿಷಯ : ವಿವಿಧ ಕೋರ್ಸ್/ವಿಷಯಗಳಿಗೆ ನೇರ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಸೆಮಿಸ್ಟರ್ ಸ್ಕೀಮ್ ಅಥವಾ ನಾನ್ ಸೆಮಿಸ್ಟರ್ ಸ್ಕೀಮ್ ಪ್ರವೇಶಾತಿ ನೀಡುವ ಬಗೆಗೆ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯು.ಜಿ/ಪಿ.ಜಿ ಪದವಿಗಳಿಗೆ ಬೇರೆ-ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶಾತಿ ಪಡೆದು ಪದವಿಯನ್ನು ಕಾರಣಾಂತರಗಳಿಂದ ಪೂರ್ಣಗೊಳಿಸದೆ ಇರುವ ಅಭ್ಯರ್ಥಿಗಳಿಗೆ ಅಂದರೆ ಯು.ಜಿ ಪದವಿಗೆ ಪಥಮ ವರ್ಷ ಮುಗಿಸಿ ದ್ವಿತೀಯ ವರ್ಷಕ್ಕೆ ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷ ಮುಗಿಸಿ ಅಂತಿಮ ವರ್ಷದ ಪದವಿ ಮತ್ತು ಪಿ.ಜಿ ಪದವಿಯಲ್ಲಿ ಪ್ರಥಮ ವರ್ಷ ನಾನ್-ಸೆಮಿಸ್ಟರ್‌ನಲ್ಲಿ ಅಧ್ಯಯನ ಮುಗಿಸಿ ಅಂತಿಮ ವರ್ಷದ ಪದವಿ ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೆ ಕರಾಮುವಿ ನಿಲಯದಲ್ಲಿ ನೇರ ಪ್ರವೇಶಾತಿ ಮಾಡಿಕೊಳ್ಳಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಅನುಕೂಲ ಕಲ್ಪಿಸಲಾಗಿದೆ. ಈ ರೀತಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಸೆಮಿಸ್ಟರ್ ಸ್ಕೀಮ್ ಅಥವಾ ನಾನ್-ಸೆಮಿಸ್ಟರ್ ಸ್ಕೀಮ್ ಪಠ್ಯಕ್ರಮಗಳನ್ನು ಅಧ್ಯಯನ ಮಾಡುವುದರ ಬಗ್ಗೆ ಗೊಂದಲಇರುವ ಕಾರಣ ಈ ವಿದ್ಯಾರ್ಥಿಗಳು ಯಾವ ಸ್ಕೀಮ್‌ನ ಪಠ್ಯಕ್ರಮಗಳನ್ನು ಅಧ್ಯಯನ ಮಾಡಬೇಕು ಎಂಬುವುದರ ಬಗ್ಗೆ ನಿರ್ಣಯ ಕೈಗೊಳ್ಳಲು ಶೈಕ್ಷಣಿಕ ಸಭೆಯ ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿದೆ.

**ತೀರ್ಮಾನ : ವಿವಿಧ ಕೋರ್ಸ್/ವಿಷಯಗಳಿಗೆ ನೇರ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಸೆಮಿಸ್ಟರ್ ಸ್ಕೀಮ್ ಅಥವ ನಾನ್ ಸೆಮಿಸ್ಟರ್ ಸ್ಕೀಮ್ ಪ್ರವೇಶಾತಿ ನೀಡಬೇಕೆ ಎಂಬುದರ ಬಗೆಗಿನ ಸಾಧಕ ಮತ್ತು ಬಾಧಕಗಳ ಬಗ್ಗೆ ಪರಾಮಾರ್ಶಿಸಿ ವರದಿ ನೀಡುವ ಸಂಬಂಧ ಒಂದು ಸಮಿತಿಯನ್ನು ರಚಿಸಿ ಸಮಿತಿಯ ವರದಿಯಂತೆ ಕ್ರಮವಹಿಸುವುದು ಸೂಕ್ತವೆಂದು ತೀರ್ಮಾನಿಸಲಾಯಿತು.**

*****

ಕುಲಸಚಿವರು

ಕುಲಪತಿಗಳು

**<u>ವಿಷಯ ಸಂಖ್ಯೆ: 26.12</u>**

ವಿಷಯ : ಬಿ.ಎ ಪದವಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ವಿಷಯ ಬದಲಾವಣೆ ಮಾಡಿಕೊಳ್ಳುವ ಬಗೆಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಬಿ.ಎ ಪದವಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದ ಒಂದು ತಿಂಗಳ ಅವಧಿಯೊಳಗೆ ರೂ.1000/- ಶುಲ್ಕವನ್ನು ಪಾವತಿಸಿ ವಿಷಯ ಬದಲಾವಣೆಗೆ ಅವಕಾಶ ಮಾಡಿಕೊಡಲಾಗಿದೆ. ಕೆಲವು ವಿದ್ಯಾರ್ಥಿಗಳು ಅವಧಿ ನಂತರವೂ ವಿಷಯ ಬದಲಾವಣೆಗೆ ಅವಕಾಶ ಮುಗಿದ ನಂತರವೂ ಕೋರಿ ಮನವಿಗಳನ್ನು ಸಲ್ಲಿಸುವುದರಿಂದ ಇಂತಹ ವಿದ್ಯಾರ್ಥಿಗಳಿಗೆ ಎಷ್ಟು ಅವಧಿಯವರೆಗೆ ಅವಕಾಶ ನೀಡಬೇಕು ಎಂಬುವುದರ ಬಗ್ಗೆ ಶೈಕ್ಷಣಿಕ ಸಭೆಯ ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿದೆ.

**ತೀರ್ಮಾನ: ಬಿ.ಎ ಪದವಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ವಿಷಯ ಬದಲಾವಣೆ ಮಾಡಿಕೊಳ್ಳುವ ಬಗ್ಗೆ ಚರ್ಚಿಸಿದ ಸಭೆಯು, ವಿದ್ಯಾರ್ಥಿಯು ಪ್ರವೇಶಾತಿ ಪಡೆದ ಒಂದು ತಿಂಗಳೊಳಗಾಗಿ ವಿಷಯ ಬದಲಾವಣೆ ಮಾಡಿಕೊಳ್ಳಲು ಅವಕಾಶ ನೀಡುವುದು ನಂತರದಲ್ಲಿ ವಿಷಯ ಬದಲಾವಣೆಗೆ ಅವಕಾಶ ನೀಡದಿರಲು ತೀರ್ಮಾನಿಸಲಾಯಿತು.**

*****

**<u>ವಿಷಯ ಸಂಖ್ಯೆ: 26.13</u>**

ವಿಷಯ : 2022-23ನೇ ಶೈಕ್ಷಣಿಕ ಸಾಲಿನ ಜುಲೈ/ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಅಂಕಿ-ಅಂಶಗಳ ಬಗೆಗೆ.

*****

2022-23ನೇ ಶೈಕ್ಷಣಿಕ ಸಾಲಿನ ಜುಲೈ/ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ವಿವಿಧ ಕೋರ್ಸ್/ವಿಷಯಗಳಿಗೆ ಜುಲೈ ಆವೃತ್ತಿಯಲ್ಲಿ ಒಟ್ಟು 21100 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಎಂಬ ವಿಷಯವನ್ನು ಸಭೆಯ ಗಮನಕ್ಕೆ ತರುತ್ತಾ, ಕೆಲವು ವಿಷಯಗಳಿಗೆ 20ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಅಂಕಿ ಅಂಶಗಳು ಮುಂದಿನಂತಿರುತ್ತದೆ.

ಎಂ.ಎ ತೆಲುಗು ವಿಷಯಕ್ಕೆ 3, ಎಂ.ಎಸ್‌ಸ್ಸಿ ಇನ್‌ಫಾರ್ ಮೇಷನ್ ಟೆಕ್ನಲಜಿ ವಿಷಯಕ್ಕೆ 8, ಬಿಎಸ್‌ಸ್ಸಿ ಹೋಮ್‌ಸೈನ್ಸ್ ವಿಷಯಕ್ಕೆ 11, ಇಂಗ್ಲೀಷ್- PGCE ವಿಷಯಕ್ಕೆ 11, ಕುವೆಂಪು ಸಾಹಿತ್ಯ ವಿಷಯಕ್ಕೆ 8, ಹಣಕಾಸು ನಿರ್ವಹಣೆ- PGCFM ವಿಷಯಕ್ಕೆ 16, ಅಂಬೇಡ್ಕರ್ ಅಧ್ಯಯನಗಳು-PGCAS ವಿಷಯಕ್ಕೆ 14, ಇನ್‌ಫಾರ್ ಮೇಷನ್ ಟೆಕ್ನಲಜಿ-PGCIT ವಿಷಯಕ್ಕೆ 5, ಕಂಪ್ಯೂಟರ್ ಅಪ್ಲಿಕೇಷನ್ PGCCA **ವಿಷಯಕ್ಕೆ** 7, ಇನ್‌ಫಾರ್ ಮೇಷನ್ ಟೆಕ್ನಲಜಿ-DIT ವಿಷಯಕ್ಕೆ 10, ಕಂಪ್ಯೂಟರ್ ಅಪ್ಲಿಕೇಷನ್ DCA ವಿಷಯಕ್ಕೆ 13, ನ್ಯೂಟ್ರಿಷನ್ & ಫುಡ್ ವಿಷಯಕ್ಕೆ 5, ಮಾಹಿತಿ ಸಂವಹನ ತಂತ್ರಜ್ಞಾನ ವಿಷಯಕ್ಕೆ 4, ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ ವಿಷಯಕ್ಕೆ 2, ಇಂಗ್ಲೀಷ್ ಎಂಪ್ಲಾಯ್‌ಮೆಂಟ್ ಅಂಡ್ ಎಂಟರ್‌ಪ್ರೆನ್ಯೂಷಿಪ್ ವಿಷಯಕ್ಕೆ 8.

ಜನವರಿ ಆವೃತ್ತಿಯಲ್ಲಿ ಒಟ್ಟು 18213 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಇವುಗಳಲ್ಲಿ ಬಿ.ಇಡಿ ಪದವಿಗೆ ಪ್ರವೇಶ ಪರೀಕ್ಷೆ ನಡೆಸಿ ನಿಯಮಾನುಸಾರ 500 ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಡಿರುವ ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿದೆ ಕೆಲವು ವಿಷಯಗಳಿಗೆ 20ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ ಅಂಕಿ ಅಂಶಗಳು ಮುಂದಿನಂತಿರುತ್ತದೆ. ಬಿ.ಎಸ್‌ಸ್ಸಿ ಇನ್‌ಫಾರ್ ಮೇಷನ್ ಟೆಕ್ನಲಜಿ ವಿಷಯಕ್ಕೆ 13, ಬಿಎಸ್‌ಸ್ಸಿ ಹೋಮ್‌ಸೈನ್ಸ್ ವಿಷಯಕ್ಕೆ 7, ಎಂ.ಎ ಉರ್ದು ವಿಷಯಕ್ಕೆ 15, ಎಂ.ಎ ತೆಲುಗು ವಿಷಯಕ್ಕೆ 1, ಎಂ.ಎಸ್‌ಸ್ಸಿ ಇನ್‌ಫಾರ್ ಮೇಷನ್ ಟೆಕ್ನಲಜಿ ವಿಷಯಕ್ಕೆ 5, ಇಂಗ್ಲೀಷ್- PGCE ವಿಷಯಕ್ಕೆ 10, ಕಮ್ಯುನಿಕೇಟಿವ್ ಇಂಗ್ಲೀಷ್- PGCCE ವಿಷಯಕ್ಕೆ 16, ಪತ್ರಿಕೋದ್ಯಮ & ಸಮೂಹ ಸಂವಹನ PGCJMC ವಿಷಯಕ್ಕೆ 10, ಕುವೆಂಪು ಸಾಹಿತ್ಯ ವಿಷಯಕ್ಕೆ 6, ಬಿಸಿನೆಸ್ಸ್ ಲಾ ವಿಷಯಕ್ಕೆ 5, ಬಿಸಿನೆಸ್ ಅಡ್ಮಿನಿಸ್ಟ್ರೇಷನ್- PGCBA ವಿಷಯಕ್ಕೆ 17, ಅಂಬೇಡ್ಕರ್ ಅಧ್ಯಯನಗಳು-PGCAS ವಿಷಯಕ್ಕೆ 7, ಇನ್‌ಫಾರ್ ಮೇಷನ್ ಟೆಕ್ನಲಜಿ-PGCIT ವಿಷಯಕ್ಕೆ 9,

ಕುಲಸಚಿವರು ಕುಲಪತಿಗಳು

ಕಂಪ್ಯೂಟರ್ ಅಪ್ಲಿಕೇಷನ್ PGCCA ವಿಷಯಕ್ಕೆ 10, ಡಿಪ್ಲೋಮ ಕನ್ನಡ ವಿಷಯಕ್ಕೆ 14, ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ ವಿಷಯಕ್ಕೆ 13, ಇನ್‌ಫಾರ್ ಮೇಷನ್ ಟೆಕ್ನಲಜಿ–DIT ವಿಷಯಕ್ಕೆ 9, ಕಂಪ್ಯೂಟರ್ ಅಪ್ಲಿಕೇಷನ್ ಆಅಂ ವಿಷಯಕ್ಕೆ 10, ಪಂಚಾಯತ್ ರಾಜ್ ವಿಷಯಕ್ಕೆ 15, ನ್ಯೂಟ್ರಿಷನ್ & ಫುಡ್ ವಿಷಯಕ್ಕೆ 2, ಇನ್‌ಫಾರ್ ಮೇಷನ್ ಕಮ್ಯೂನಿಕೇಷನ್ ಟೆಕ್ನಲಜಿ ವಿಷಯಕ್ಕೆ 5, ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ ವಿಷಯಕ್ಕೆ 4,

ಮೇಲಿನ ಎಲ್ಲಾ ಅಂಶಗಳನ್ನು ಶೈಕ್ಷಣಿಕ ಸಭೆಯಲ್ಲಿ ನಿರ್ಣಯಕ್ಕಾಗಿ ಹಾಗೂ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

**ತೀರ್ಮಾನ:** **1.** **2022–23ನೇ ಶೈಕ್ಷಣಿಕ ಸಾಲಿನ ಜುಲೈ/ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಅಂಕಿ–ಅಂಶಗಳನ್ನು ಅವಗಾಹಿಸಲಾಯಿತು. ಮುಂದುವರೆದು, 20 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶಾತಿ ಹೊಂದಿರುವ ವಿಭಾಗಗಳು ಮುಂದಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಅವಶ್ಯ ಕ್ರಮಗಳನ್ನು ವಹಿಸಬೇಕು ಇಲ್ಲವಾದ್ದಲ್ಲಿ ಅಂತಹ ಕಾರ್ಯಕ್ರಮವನ್ನು ಸ್ಥಗಿತಗೊಳಿಸಬಹುದು ಎಂದು ತಿಳಿಸಿ ಡೀನ್ (ಶೈಕ್ಷಣಿಕ) ವಿಭಾಗದಿಂದ ಸುತ್ತೋಲೆಯನ್ನು ಹೊರಡಿಸುವುದು ಮತ್ತು ಪ್ರಸ್ತುತ ವಿಭಾಗಗಳಲ್ಲಿ 20ಕ್ಕಿಂತ ಕಡಿಮೆ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಸಮರ್ಥನೆ ನೀಡಲಾಯಿತು. 2023–24ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿ ಪೂರ್ಣಗೊಂಡ 15 ದಿನಗಳೊಳಗಾಗಿ 20 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶಾತಿ ಹೊಂದಿರುವ ಕಾರ್ಯಕ್ರಮಗಳನ್ನು ಆ ಸಾಲಿಗೆ ಸ್ಥಗಿತಗೊಳಿಸಿ ವಿದ್ಯಾರ್ಥಿಗಳಿಗೆ ಶುಲ್ಕ ಹಿಂದಿರುಗಿಸಲು ಕ್ರಮವಹಿಸಲು ಪ್ರವೇಶಾತಿ ವಿಭಾಗಕ್ಕೆ ಡೀನ್ (ಶೈಕ್ಷಣಿಕ) ವಿಭಾಗದಿಂದ ಆದೇಶ ಹೊರಡಿಸಲು ತೀರ್ಮಾನಿಸಲಾಯಿತು.**

**2. 20 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶಾತಿ ಹೊಂದುವ ಕಾರ್ಯಕ್ರಮವನ್ನು ಆ ಸಾಲಿನಲ್ಲಿ ಸ್ಥಗಿತಗೊಳಿಸಿ ಶುಲ್ಕ ಹಿಂದಿರುಗಿಸುವ ಬಗ್ಗೆ ಪ್ರವೇಶಾತಿ ಅಧಿಸೂಚನೆಯಲ್ಲಿ ಹಾಗೂ ವಿವರಣಾ ಪುಸ್ತಕಗಳಲ್ಲಿ ಮಾಹಿತಿ ನೀಡುವಂತೆ ತೀರ್ಮಾನಿಸಲಾಯಿತು.**

*****

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 26.14

ವಿಷಯ: ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ನಡೆಸಲಾಗಿರುವ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಸಭೆಯ ನಡಾವಳಿಗಳ ಬಗ್ಗೆ

******

| | |
|---|---|
| 01 | **ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 21-09-2021 ರಂದುನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ : 04-07-2022 ರಿಂದ 06-07-2022 ರ ವರೆಗೆ 03 ದಿನಗಳು ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>c. ದಿನಾಂಕ: 05-01-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>d. ದಿನಾಂಕ: 07-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 02 | **ಇಂಗ್ಲೀಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 27-02-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 16-05-2022 ರಿಂದ 17-05-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 03 | **ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a ದಿನಾಂಕ: 10-01-2023 ರಂದು ನಡೆದ ಸ್ನಾತಕ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b ದಿನಾಂಕ: 15-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 04 | **ಉರ್ದು ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 16-09-2022 ಮತ್ತು 17-09-2022 ರಂದು ನಡೆದ ಸಂಯುಕ್ತ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 05 | **ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 31-05-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 04-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |

ಕುಲಸಚಿವರು

ಕುಲಪತಿಗಳು

| | |
|---|---|
| 06 | **ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>ದಿನಾಂಕ: 25-01-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 07 | **ನಿರ್ವಹಣಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>**a.** ದಿನಾಂಕ: 22-03-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**b.** ದಿನಾಂಕ: 24-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**c.** ದಿನಾಂಕ: 03-03-2022 ರಂದು ನಡೆದ ಸ್ನಾತಕ ಅಧ್ಯಯನ ಮಂಡಳಿಸಭೆಯ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**d.** ದಿನಾಂಕ: 01-05-2021 ರಂದು ನಡೆದ ಸ್ನಾತಕ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**e.** ದಿನಾಂಕ: 29-03-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 08 | **ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>**a.** ದಿನಾಂಕ: 20-05-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**b.** ದಿನಾಂಕ: 25-02-2021 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**c.** ದಿನಾಂಕ: 15-12-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**d.** ದಿನಾಂಕ: 22-01-2021 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 09 | **ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 21-04-2021 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>a. ದಿನಾಂಕ: 30.5.2022. ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 25.11.2022. ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>c. ದಿನಾಂಕ: 07.1.2023. ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>d. ದಿನಾಂಕ: 23.3.2023. ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>e. ದಿನಾಂಕ: 01.3.2023. ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>f. ದಿನಾಂಕ: 21-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |

ಕುಲಸಚಿವರು

ಕುಲಪತಿಗಳು

| | |
|---|---|
| 10 | **ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>ದಿನಾಂಕ: 02.8.2022. ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 11 | **ವಾಣಿಜ್ಯಶಾಸ್ತ್ರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 06-12-2022 ಮತ್ತು 7-12-2022ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 30-12-2022 ರಂದು ನಡೆದ ಸ್ನಾತಕ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>c. ದಿನಾಂಕ: 13-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>d. ದಿನಾಂಕ: 27-03-2023 ರಂದು ನಡೆದ ಸ್ನಾತಕ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>e ದಿನಾಂಕ: 03-03-2022 ರಂದು ನಡೆದ ಸ್ನಾತಕ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>f ದಿನಾಂಕ: 05-01-2021 ರಂದು ನಡೆದ ಸ್ನಾತಕ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 12 | **ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>ದಿನಾಂಕ: 05-12-2022 ಮತ್ತು 06.12.2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 13 | **ಪ್ರಾಚೀನ ಪುರಾತತ್ವ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>ದಿನಾಂಕ: 24-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 14 | **ಪತ್ರಿಕೋದ್ಯಮ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 05-04-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 17-08-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>c. ದಿನಾಂಕ: 26-12-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>d ದಿನಾಂಕ: 06-01-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**e.** ದಿನಾಂಕ: 07-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>**f.** ದಿನಾಂಕ: 29-04-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |

ಕುಲಸಚಿವರು

ಕುಲಪತಿಗಳು

| | |
|---|---|
| 15 | **ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>ದಿನಾಂಕ: 16-01-2023 ಮತ್ತು 17-01-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 16 | **ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ**<br>ದಿನಾಂಕ: 04-04-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 17 | **ಗಣಕವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>ದಿನಾಂಕ: 21-12-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 18 | **ಆಹಾರ ಮತ್ತು ಪೌಷ್ಟಿಕತೆ ಅಧ್ಯಯನ ವಿಭಾಗ**<br>ದಿನಾಂಕ: 24-03-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 19 | **ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 06-11-2022 ಮತ್ತು 7-11-2022 ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b ದಿನಾಂಕ: 21-03-2023 ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 20 | **ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a.ದಿನಾಂಕ:15-03-2023 ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 30-03-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>c. ದಿನಾಂಕ: 09-04-2021 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>d. ದಿನಾಂಕ: 05-01-2023 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 21 | **ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 06-07-2021ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b.ದಿನಾಂಕ: 23-06-2021ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 22 | **ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 06-06-2022 ಮತ್ತು 09-06-2022 ರಂದು ನಡೆದ ಸ್ನಾತಕ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 06-05-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>c. ದಿನಾಂಕ: 16-05-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |

ಕುಲಸಚಿವರು

ಕುಲಪತಿಗಳು

| | |
|---|---|
| 23 | **ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 03-04-2021 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b . ದಿನಾಂಕ: 11-06-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 24 | **ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 03-12-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 14-03-2022 ರಂದು ನಡೆದ ಸ್ನಾತಕೋತ್ತರ ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 25 | **Biochemistry ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>ದಿನಾಂಕ: 21-3-2022 ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 26 | **Biotechnology ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>a. ದಿನಾಂಕ: 03-08-2020 ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>b. ದಿನಾಂಕ: 03-03-2021 ರಂದು ನಡೆದ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>c. ದಿನಾಂಕ: 19-03-2022 ರಂದು ನಡೆದ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 27 | **ಡಾ. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಪೀಠ**<br>ದಿನಾಂಕ 17.06.2022ರಂದು ನಡೆದ ಸಭಾ ನಡಾವಳಿ ಪಿ.ಜಿ.ಸರ್ಟಿಫಿಕೇಟ್ ಅಧ್ಯಯನದ ಮಂಡಳಿ ಸಭಾ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 28 | **ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ**<br>ದಿನಾಂಕ-15-02-2022 ಮತ್ತು 16-02-2022ರಂದು ನಡೆದ ಸ್ನಾತಕೋತ್ತರ ಕುವೆಂಪು ಸಾಹಿತ್ಯ ಸರ್ಟಿಫಿಕೇಟ್ ಕೋರ್ಸ್ ಸಭಾ ನಡಾವಳಿ ನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 29 | **Zoology ಅಧ್ಯಯನ ವಿಭಾಗ**<br>ದಿನಾಂಕ: 29-09-2021 ಮತ್ತು 30-09-2021 ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| 30 | **ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**<br>ದಿನಾಂಕ: 09-03-2023 ಮತ್ತು 10-03-2023 ರಂದು ನಡೆದ ಸ್ನಾತಕ/ ಸ್ನಾತಕೋತ್ತರ, ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |

ಕುಲಸಚಿವರು

ಕುಲಪತಿಗಳು

| 31 | **ಸಸ್ಯಶಾಸ್ತ್ರ ಅಧ್ಯಯನ ವಿಭಾಗ**<br>ದಿನಾಂಕ: 08-03-2023 ರಂದು ನಡೆದ ಸ್ನಾತಕ/ ಸ್ನಾತಕೋತ್ತರ (ಸಂಯುಕ್ತ) ಅಧ್ಯಯನ ಮಂಡಳಿ ಸಭೆಯ ಸಭಾನಡಾವಳಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
|---|---|

ಈ ಮೇಲಿನ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಗಳ ನಡಾವಳಿಗಳನ್ನು ಶೈಕ್ಷಣಿಕ ಮಂಡಳಿಯ ಸಭೆಯ ಮುಂದೆ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ: ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ನಡೆಸಲಾಗಿರುವ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಸಭೆಯ ನಡಾವಳಿಗಳಿಗೆ ಅನುಸಮರ್ಥನೆ ನೀಡಲಾಯಿತು. ಮುಂದುವರೆದು, ಇನ್ನು ಮುಂದೆ ಪ್ರತಿ ಶೈಕ್ಷಣಿಕ ಸಭೆಗೆ ಆಯಾ ಅವಧಿಯಲ್ಲಿ ನಡೆಸಿರುವ ಸಭೆಗಳ ನಡಾವಳಿಯನ್ನು ಮಂಡಿಸುವಂತೆ ತಿಳಿಸಲಾಯಿತು. ಈ ಮಾಹಿತಿಯನ್ನು ಡೀನ್ (ಶೈಕ್ಷಣಿಕ) ವಿಭಾಗದ ವತಿಯಿಂದ ಸುತ್ತೋಲೆ ಹೊರಡಿಸುವುದು.**

*****

**ವಿಷಯ ಸಂಖ್ಯೆ:** 26.15

ವಿಷಯ: 2018-19 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬಂದಂತೆ ವಿದ್ಯಾರ್ಥಿಗಳು ತಿದ್ದುಪಡಿಗಾಗಿ ಸಲ್ಲಿಸುವ ಅರ್ಜಿಗಳನ್ನು ತ:ಖ್ತೀಕರಣಗೊಂಡ ದಾಖಲಾತಿ ಪುಸ್ತಕದನ್ವಯ (As per ledger) ತಾಳೆ ಮಾಡಿ ಅರ್ಜಿಗಳನ್ನು ವಿಲೇವಾರಿ ಮಾಡುವ ಬಗೆಗೆ

******

2018-19 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬಂದಂತೆ ವಿಶ್ವವಿದ್ಯಾನಿಲಯದಲ್ಲಿ ವಿವಿದ ಶಿಕ್ಷಣ ಕ್ರಮಗಳನ್ನು ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ಅಂಕಪಟ್ಟಿಗಳು ಹಾಗು ಇತರೆ ಪ್ರಮಾಣ ಪತ್ರಗಳನ್ನು 'ಎ' ಫಾರಂ ಮತ್ತು ಓ.ಎಂ.ಆರ್ ನೊಂದಿಗೆ ತಾಳೆ ಮಾಡಿ ವಿಲೇವಾರಿ ಮಾಡುವುದು ವಿಳಂಬವಾಗುತ್ತಿದು, ಹಾಗು ಮೂಲ ದಾಖಲಾತಿ ಪುಸ್ತಕಗಳನ್ನು ನಿರಂತರವಾಗಿ ಬಳಸುತ್ತಿರುವುದರಿಂದ ಬೇಗ ನಶಿಸಿಹೋಗುತ್ತಿರುವ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ತ:ಖ್ತೀಕರಣಗೊಂಡ ದಾಖಲಾತಿ ಪುಸ್ತಕದನ್ವಯ (As per ledger) ತಾಳೆಮಾಡಿ ಕ್ರಮಬದ್ದವಾಗಿದೆ, ಎಂದು ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳನ್ನು ಕಡತ ಮಂಡಿಸದೆ ವಿದ್ಯಾರ್ಥಿಗಳಿಗೆ ಶೀಘ್ರವಾಗಿ ವಿತರಿಸಲು ಕ್ರಮವಹಿಸಲಾಗುತ್ತಿದೆ. ಸದರಿ ವಿಷಯವನ್ನು ಶೈಕ್ಷಣಿಕ ಸಭೆಗೆ 'ಅನುಸಮರ್ಥನೆಗಾಗಿ' ಮಂಡಿಸಲಾಗಿದೆ.

ತೀರ್ಮಾನ: **2018-19 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬಂದಂತೆ ವಿದ್ಯಾರ್ಥಿಗಳು ತಿದ್ದುಪಡಿಗಾಗಿ ಸಲ್ಲಿಸುವ ಅರ್ಜಿಗಳನ್ನು ತ:ಖ್ತೀಕರಣಗೊಂಡ ದಾಖಲಾತಿ ಪುಸ್ತಕದನ್ವಯ (As per ledger) ತಾಳೆ ಮಾಡಿ ಕಡತ ಮಂಡಿಸದೆ ಅರ್ಜಿಗಳನ್ನು ವಿಲೇವಾರಿ ಮಾಡುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.**

******

ಕುಲಸಚಿವರು                                                ಕುಲಪತಿಗಳು

ವಿಷಯ ಸಂಖ್ಯೆ: 26.16

**ವಿಷಯ: ವಿದ್ಯಾರ್ಥಿಗಳಿಗೆ BEST PROJECT AWARD ನೀಡುವುದರ ಕುರಿತು**

******

ದಿನಾಂಕ 05.12.2022 ರಂದು ನೆಡೆದ 60ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯ ಸಂಖ್ಯೆ 60.14 ರಲ್ಲಿ ಕರಾಮುವಿಯಲ್ಲಿ Center for Innovation and Incubation ನ ಅಡಿಯಲ್ಲಿ Best Project Award ನೀಡುವುದರ ಬಗ್ಗೆ ವಿಷಯ ಮಂಡಿಸಿದ್ದು ಸದರಿ ವಿಷಯದ ತೀರ್ಮಾನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ನೀಡಲುದ್ದೇಶಿಸಿರುವ Center for Innovation and Incubation ನ ಅಡಿಯಲ್ಲಿ Best Project Award ನೀಡುವ ಸಂಬಂಧ ವಿಷಯ ತಜ್ಞರ ಸಮಿತಿಯನ್ನು ರಚಿಸಿ ಸಮಿತಿಯ ವರದಿಯ ಆಧಾರದ ಮೇಲೆ ತೀರ್ಮಾನ ಕೈಗೊಳ್ಳುವುದು ಎಂದು ತೀರ್ಮಾನಿಸಲಾಗಿತ್ತು. ಅದರಂತೆ Center for Innovation and Incubation ಗೆ ಸಂಬಂಧಿಸಿದಂತೆ ಒಂದು IIC Council ಅನ್ನು ರಚಿಸಿದ್ದು ಸದರಿ ಮಂಡಳಿಯಲ್ಲಿ ವಿಷಯವನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳುವಂತೆ ಆದೇಶಿಲಾಗಿತ್ತು. ಅದರಂತೆ ದಿನಾಂಕ 07–06–2023 ರಂದು ಸಭೆ ನಡೆಸಿ ನಡಾವಳಿಯನ್ನು ಲಗತ್ತಿಸಿದೆ.

ಸದರಿ ಸಭೆಯ ತೀರ್ಮಾನದಂತೆ

1. ವಿಷಯವಾರು Best Project Award ನೀಡುವುದು
2. ಯಾವುದಾದರೂ ವಿಷಯದಲ್ಲಿ 500ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳಿದ್ದಲ್ಲಿ ಪ್ರತಿ 500 ವಿದ್ಯಾರ್ಥಿಗಳಿಗೆ ಒಂದರಂತೆ ನೀಡುವುದು.
3. ವಿದ್ಯಾರ್ಥಿಗಳಿಗೆ ವಿವಿಯ ವತಿಯಿಂದ ಪ್ರಮಾಣ ಪತ್ರ ನೀಡುವುದು ಹಾಗೂ ನಗದು ಬಹುಮಾನ ನೀಡುವ ವಿಚಾರದಲ್ಲಿ ವಿವಿಯು ತೀರ್ಮಾನ ಕೈಗೊಳ್ಳುವುದು
4. ವಿದ್ಯಾರ್ಥಿಗಳಿಗೆ Project ವೈವಾ ನಡೆಸುವ ತಜ್ಞರಿಂದ Best Project ಬಗ್ಗೆ ಅಭಿಪ್ರಾಯ ಪಡೆದು ವಿಭಾಗೀಯ ಕೌನ್ಸಿಲ್‌ನಲ್ಲಿ ತೀರ್ಮಾನಿಸುವುದು

ಪ್ರಸ್ತುತ 11 ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಎರಡನೇ ವರ್ಷದ ವಿದ್ಯಾರ್ಥಿಗಳು Project ಮಾಡುತ್ತಿದ್ದು, ಮುಂದಿನ ಶೈಕ್ಷಣಿಕ ಸಾಲಿನಲ್ಲಿ 18 ಕಾರ್ಯಕ್ರಮಗಳಲ್ಲಿ ಹಾಗೂ 2024– 2025 ಸಾಲಿನಿಂದ 21 ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳು Project ಮಾಡಬೇಕಿರುತ್ತದೆ.

ತೀರ್ಮಾನ: **Best Project Award ನೀಡುವುದರ ಸಂಬಂಧವಾಗಿ ವಿವರವಾಗಿ ಚರ್ಚಿಸಿದ ಸಭೆಯು Best Project Award ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ Certificate ನೀಡುವುದು ಎಂದು ತೀರ್ಮಾನಿಸಲಾಯಿತು.**

******

ಕುಲಸಚಿವರು

ಕುಲಪತಿಗಳು

## ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯಗಳು:

**ವಿಷಯ ಸಂಖ್ಯೆ: 26.17**

**ವಿಷಯ: ಕರಾಮುವಿ ನಿಲಯಕ್ಕೆ ನ್ಯಾಕ್ ಮಾನ್ಯತೆ ಸಂಬಂಧ NAAC Peer Committee ವರದಿ ಬಗೆಗೆ**

******

ಕರಾಮುವಿ ನಿಲಯಕ್ಕೆ ನ್ಯಾಕ್ ಮಾನ್ಯತೆ ಸಂಬಂಧವಾಗಿ ದಿನಾಂಕ: 04.05.2023 ರಿಂದ 06.05.2023ರ ವರೆಗೆ **NAAC Peer Committee** ಯು ಭೇಟಿ ನೀಡಿ ವಿವಿಧ ವಿಭಾಗಗಳಿಗೆ ನೀಡಿ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳ ಅಗತ್ಯ ಮಾಹಿತಿಗಳನ್ನು ಪಡೆದು ಮೌಲ್ಯಮಾಪನ ಮಾಡಿ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಅದರಂತೆ, ಸದರಿ ಸಮಿತಿಯು ಸಲ್ಲಿಸಿರುವ ವರದಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಗಮನಕ್ಕೆ ತರಲಾಗಿದೆ.

ಮುಂದುವರೆದು, ಪ್ರಸ್ತುತ ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ **A+** ಮಾನ್ಯತೆ **(CGPA 3.31)** ದೊರೆತಿದ್ದು ಮೇಲಿನ ಅಂಶಗಳನ್ನು ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಮುಂದೆ ವಿಷಯ ಮಂಡಿಸಿದೆ.

**ತೀರ್ಮಾನ: ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ A+ ಮಾನ್ಯತೆ (CGPA 3.31) ದೊರೆತಿರುವ ಬಗ್ಗೆ ಹರ್ಷವ್ಯಕ್ತಪಡಿಸಿದರು.**

******

**ವಿಷಯ ಸಂಖ್ಯೆ: 26.18**

**ವಿಷಯ: ವಿವಿಧ ನಿಕಾಯಗಳಿಗೆ (School) ನಿರ್ದೇಶಕರನ್ನು ನೇಮಿಸುವ ಬಗ್ಗೆ.**

******

ಕರಾಮುವಿ ನಿಲಯದ ವಿವಿಧ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಯು.ಜಿ.ಸಿ. ಕಾರ್ಯಸೂಚಿಯಂತೆ ಸ್ಕೂಲ್ ನಿರ್ದೇಶಕರುಗಳನ್ನು ನೇಮಿಸಬೇಕಿರುತ್ತದೆ. ಅದರಂತೆ, ಈ ಹಿಂದೆ ವಿವಿ ನಿಲಯದ ಆದೇಶ ಸಂಖ್ಯೆ: ಕರಾಮುವಿ/ಡೀನ್ (ಶೈ)–1/2022–23 ದಿನಾಂಕ: 02.08.2022ರರಲ್ಲಿ ನೇಮಿಸಲಾಗಿದ್ದ ಪ್ರಭಾರ ಸ್ಕೂಲ್ ನಿರ್ದೇಶಕರ ಬದಲಾಗಿ ಪ್ರಸ್ತುತ ಈ ಮುಂದಿನಂತೆ ಸ್ಕೂಲ್ ನಿರ್ದೇಶಕರುಗಳನ್ನು ನೇಮಿಸುವ ಸಂಬಂಧ ಮಾನ್ಯ ಕುಲಪತಿಗಳು ಅನುಮೋದನೆ ನೀಡಿದ್ದು, ಅದರಂತೆ ಸ್ಕೂಲ್ ನಿರ್ದೇಶಕರನ್ನು ನೇಮಿಸುವ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯ ಒಪ್ಪಿಗೆಗಾಗಿ ವಿಷಯ ಮಂಡಿಸಿದೆ.

| ಕ್ರಮ ಸಂಖ್ಯೆ | ನಿಕಾಯ / ಸ್ಕೂಲ್ | ನಿರ್ದೇಶಕರು |
|---|---|---|
| 1 | ಭಾಷ ನಿಕಾಯ | ಪ್ರೊ. ರಾಮನಾಯಥಂ ನಾಯ್ಡು ಎಂ |
| 2 | ಸಮಾಜ ವಿಜ್ಞಾನ ನಿಕಾಯ | ಡಾ. ಶಂಕರನಾರಣಪ್ಪ |
| 3 | ಶಿಕ್ಷಣ ನಿಕಾಯ | ಪ್ರೊ. ಎನ್. ಲಕ್ಷ್ಮಿ |
| 4 | ವಾಣಿಜ್ಯ ನಿಕಾಯ | ಡಾ. ರಮಾನಂದ ಎಂ.ಎಸ್ |
| 5 | ನಿರ್ವಹಣಾಶಾಸ್ತ್ರ ನಿಕಾಯ | ಪ್ರೊ. ಮಹದೇವಮೂರ್ತಿ |
| 6 | ವಿಜ್ಞಾನ ನಿಕಾಯ | ಪ್ರೊ. ಕಾಂಬ್ಳೆ ಅಶೋಕ್ |

**ತೀರ್ಮಾನ: ಮೇಲಿನಂತೆ ವಿವಿಧ ನಿಕಾಯಗಳಿಗೆ (School) ನಿರ್ದೇಶಕರನ್ನು ನೇಮಿಸುವ ಬಗ್ಗೆ ಸಭೆಯು ಅನುಮೋದಿಸಿತು.**

******

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ: 26.19

ವಿಷಯ: **Online Programme** ಪ್ರಾರಂಭಿಸುವ ಬಗ್ಗೆ.

******

ವಿಶ್ವವಿದ್ಯಾನಿಲಯಕ್ಕೆ ಪ್ರಸ್ತುತ ನ್ಯಾಕ್ A+ ಮಾನ್ಯತೆ (CGPA 3.31) ದೊರೆತಿದ್ದು, ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಹೆಚ್ಚಿಸುವ ಹಾಗೂ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಅನುಕೂಲವಾಗುವ ರೀತಿಯಲ್ಲಿ ವಿವಿಧ ಶಿಕ್ಷಣ ಕ್ರಮಗಳಲ್ಲಿ ಆನ್‌ಲೈನ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನಕ್ಕೆ ವಿಷಯ ಮಂಡಿಸಿದೆ.

**ತೀರ್ಮಾನ: ವಿದ್ಯಾರ್ಥಿಗಳ ಭವಿಷ್ಯ ದೃಷ್ಟಿಯಿಂದ ಹಾಗೂ ವಿವಿ ನಿಲಯದ ಹಿತದೃಷ್ಟಿಯಿಂದ ಯು.ಜಿ.ಸಿ. ನಿಯಮಾವಳಿಗಳ ರೀತಿಯಲ್ಲಿ Online Programme ಪ್ರಾರಂಭಿಸುವುದರ ಬಗ್ಗೆ ಅನುಮೋದಿಸಲಾಯಿತು.**

******

**ವಿಷಯ ಸಂಖ್ಯೆ: 26.20**

**ವಿಷಯ :** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕೇಂದ್ರಗಳನ್ನು ವಿವಿಧ ಜಿಲ್ಲೆಗಳು ಮತ್ತು ಪ್ರಾಂತ್ಯವಾರು ಅಗತ್ಯವಿರುವ ಸ್ಥಳಗಳಲ್ಲಿ ನೂತನವಾಗಿ ಪ್ರಾರಂಭಿಸುವ ಬಗ್ಗೆ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಶಯವಾದ "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ" ಎಂಬ ಧ್ಯೇಯ ವಾಕ್ಯದಂತೆ ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ, ಹಿಂದುಳಿದವರಿಗೆ, ದೀನದಲಿತರಿಗೆ, ಬಡವರಿಗೆ ಹಾಗೂ ಗುಡ್ಡಗಾಡು ಅರಣ್ಯದಂಚಿನ ಬಡಮಕ್ಕಳಿಗೆ ದೂರಶಿಕ್ಷಣದ ಮೂಲಕ ಉನ್ನತ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ನೀಡುವ ಸದುದ್ದೇಶದಿಂದ ಈಗಾಗಲೆ 23 ಪ್ರಾದೇಶಿಕ ಕೇಂದ್ರಗಳನ್ನು ತೆರೆದು ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ: 18.03.2023 ರಂದು ನಡೆದ 171 ರ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯಂತೆ 11 ಹೊಸ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಿ ದಿನಾಂಕ: 29.05.2023 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಮುಂದುವರೆದು, ಉಳಿದಂತೆ ರಾಜ್ಯದ ಹಲವು ಪ್ರಾಂತ್ಯಗಳಲ್ಲಿ ಮತ್ತು ಅಗತ್ಯವಿರುವ ಸ್ಥಳಗಳಲ್ಲಿ ಉನ್ನತ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಹೊಸ ಪ್ರಾದೇಶಿಕ ಕೇಂದ್ರಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಬೇಕು ಎಂಬುದರ ಪ್ರಸ್ತಾವನೆಯನ್ನು ಚರ್ಚೆಗಾಗಿ ನಿರ್ಣಯ ಕೈಗೊಳ್ಳಲು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಪ್ರಾದೇಶಿಕ ಕೇಂದ್ರಗಳ ವಿವರವನ್ನು ಮಾಹಿತಿಗಾಗಿ ಲಗತ್ತಿಸಿದೆ.

**ತೀರ್ಮಾನ: ರಾಜ್ಯದ ವಿವಿಧ ಜಿಲ್ಲೆ ಮತ್ತು ಪ್ರಾಂತ್ಯವಾರು ಅಗತ್ಯವಿರುವ ಸ್ಥಳಗಳಲ್ಲಿ ನೂತನವಾಗಿ ಕರಾಮುವಿ ನಿಲಯದ ಪ್ರಾದೇಶಿಕ ಕೇಂದ್ರಗಳನ್ನು ತೆರೆಯುವ ಬಗ್ಗೆ ಒಪ್ಪಿಗೆ ನೀಡಲಾಯಿತು.**

******

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ: 26.21

ವಿಷಯ: **Alumni Platform** ಗೆ ಹೊಸದಾಗಿ **Software** ಖರೀದಿಸುವ ಬಗೆಗೆ.

******

ಕರಾಮುವಿ ನಿಲಯವು 25 ವರ್ಷಗಳನ್ನು ಪೂರ್ಣಗೊಳಿಸಿದ್ದು 10 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ದೂರ ಶಿಕ್ಷಣದಡಿ ಉನ್ನತ ಶಿಕ್ಷಣದ ಪ್ರಯೋಜನ ಪಡೆದಿರುತ್ತಾರೆ. ಈ ಎಲ್ಲಾ ವಿದ್ಯಾರ್ಥಿಗಳನ್ನು **Alumni Association** ನಲ್ಲಿ ನೋಂದಣಿ ಮಾಡಿಸಿ ಉತ್ತಮ **Alumni Netwok** ಪಡೆದಲ್ಲಿ ವಿವಿ ಯ ಬೆಳವಣಿಗೆಗೆ ಪೂರಕವಾಗುವುದು. ಈ ಹಿನ್ನೆಲೆಯಲ್ಲಿ ಕರಾಮುವಿ ಹಳೇಯ ವಿದ್ಯಾರ್ಥಿಗಳನ್ನು ಸುಲಭವಾಗಿ ಸಂಪರ್ಕಿಸಲು ಒಂದು **Alumni Platform** ನ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಪದವಿ / ಶಿಕ್ಷಣ ಕ್ರಮವನ್ನು ಪೂರ್ಣಗೊಳಿಸಿರುವ ಲಕ್ಷಾಂತರ ವಿದ್ಯಾರ್ಥಿಗಳ ಸಂಘಟಸುವ ಸಲುವಾಗಿ ಹೊಸದಾಗಿ **Alumni Platform** ಸಿದ್ಧಪಡಿಸಿಕೊಳ್ಳಲು ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ: **ಹೊಸದಾಗಿ Alumni Platform ಸಿದ್ಧಪಡಿಸಿಕೊಳ್ಳಲು ಒಪ್ಪಿಗೆ ನೀಡಲಾಯಿತು.**

******

ವಿಷಯ ಸಂಖ್ಯೆ: 26.22

ವಿಷಯ: **MBA ಕಾರ್ಯಕ್ರಮದಲ್ಲ Hospital and Health Care Management ಅನ್ನು ನೂತನ Specialization ಆಗಿ ಆರಂಭಿಸುವುದರ ಕುರಿತು.**

******

ನಿರ್ವಹಣಾಶಾಸ್ತ್ರ ವಿಭಾಗದ ಮೂರು ಹಾಗೂ ನಾಲ್ಕನೇ ಸೆಮಿಸ್ಟರ್‌ನಲ್ಲಿ ಈಗಾಗಲೇ 7 **Specialization ಗಳಿದ್ದು, 8ನೇ Specilization ಆಗಿ Hospital and Health Care Management** ಅನ್ನು ನೂತನ ವಿಷಯವನ್ನಾಗಿ ಅಳವಡಿಸಿಕೊಳ್ಳಲು ವಿಭಾಗಿಯ ಸಭೆ **(Departmant Council Meeting)** ನಲ್ಲಿ ಚರ್ಚಿಸಲಾಗಿದ್ದು, ಎಲ್ಲಾ ಅಧ್ಯಾಪಕರುಗಳು ಒಪ್ಪಿಗೆಯನ್ನು ಸೂಚಿಸಿರುತ್ತಾರೆ (ಲಗತ್ತಿಸಿದೆ). ಈ ವಿಷಯವನ್ನು 2023–24ನೇ ಶೈಕ್ಷಣಿಕ ಸಾಲಿಗೆ ಅಳವಡಿಸಿಕೊಳ್ಳಲು ಶೈಕ್ಷಣಿಕ ಮಂಡಳಿಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ: **2023–24ನೇ ಸಾಲಿನಿಂದ MBA ಕಾರ್ಯಕ್ರಮದಲ್ಲ Hospital and Health Care Management ಅನ್ನು ನೂತನ Specialization ಆಗಿ ಆರಂಭಿಸುವುದರ ಕುರಿತು ಅನುಮೋದನೆ ನೀಡಲಾಯಿತು.**

******

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ: 26.23

**ವಿಷಯ: Ph.D ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣ ಪತ್ರ ನೀಡುವ ಬಗೆಗೆ.**

******

ವಿವಿ ನಿಲಯದಿಂದ 2014-15ನೇ ಸಾಲಿನಲ್ಲಿ ಪಿಹೆಚ್.ಡಿ. ಪ್ರವೇಶಾತಿಗಾಗಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ವಿದ್ಯರ್ಥಿಗಳು ಅರ್ಜಿಸಲ್ಲಿಸಿ ಸಂಬಂಧಪಟ್ಟ ಯು.ಜಿ.ಸಿ. ನಿಯಮಾವಳಿ ಹಾಗೂ ಕರಾಮುವಿ ಪಿಹೆಚ್.ಡಿ ಆಧ್ಯಾದೇಶದನ್ವಯ ಪ್ರವೇಶಾತಿ ಪಡೆದು ಸಂಶೋಧನಾ ಕಾರ್ಯವನ್ನು ಕೈಗೆತ್ತಿಕೊಂಡಿರುತ್ತಾರೆ. 15ನೇ ಜೂನ್ 2015ರಲ್ಲಿ ಯು.ಜಿ.ಸಿ. ಸಾರ್ವಜನಿಕ ತಿಳುವಳಿಕೆ ಪತ್ರ ಹೊರಡಿಸಿ 2013-14ನೇ ಸಾಲಿನಿಂದಲೇ ಜಾರಿಗೆ ಬಂದಂತೆ ವಿವಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ರದ್ದುಗೊಳಿಸಿತ್ತು ಹಾಗೂ ದೇಶದ ಎಲ್ಲಾ ಮುಕ್ತ ವಿಶ್ವವಿದ್ಯಾನಿಲಯಗಳ ಪಿಹೆಚ್.ಡಿ. ಕಾರ್ಯಕ್ರಮವನ್ನು ಸಹ ಸ್ಥಗಿತಗೊಳಿಸಿತು. ಆ ನಂತರ 2018ರಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳು ಆಯಾ ವಿಶ್ವವಿದ್ಯಾನಿಲಯದ ಆಧ್ಯಾದೇಶದ ಅನುಸಾರ ಪಿಹೆಚ್.ಡಿ. ಕಾರ್ಯಕ್ರಮವನ್ನು ನಡೆಸಬಹುದು ಎಂದು ಮತ್ತೊಂದು ಸಾರ್ವಜನಿಕ ತಿಳುವಳಿಕೆ ಪತ್ರ ನೀಡತ್ತು. ಈ ಹಿನ್ನೆಲೆಯಲ್ಲಿ 2015 ರಿಂದ 2019ರ ವರೆಗಿನ ಅವಧಿಯನ್ನು ವಿಳಂಬ ಮನ್ನ ಮಾಡಿ ಕಾರ್ಯಕ್ರಮವನ್ನು ಮುಂದುವರೆಸಿತು. ಸದರಿ ವಿದ್ಯಾರ್ಥಿಗಳು ಪ್ರಸ್ತುತ ಪಿಹೆಚ್.ಡಿ. ಕಾರ್ಯಕ್ರಮವನ್ನು ಮುಗಿಸಿದ್ದು, ಇವರುಗಳಿಗೆ ಘಟಿಕೋತ್ಸವ ಪ್ರಮಾಣ ಪತ್ರ ನೀಡುವ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯ ಮಂಡಿಸಿದೆ.

**ತೀರ್ಮಾನ: ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.**

1. ಸದರಿ ವಿದ್ಯಾರ್ಥಿಗಳು 2019ರಲ್ಲಿ ಕೋರ್ಸ್ ವರ್ಕ್ ಪರೀಕ್ಷೆ ಪೂರ್ಣಗೊಳಿಸಿ ಖಾಯಂ ನೋಂದಣಿ ಪಡೆದ ಹಿನ್ನೆಲೆಯಲ್ಲಿ ಪ್ರತ್ಯೇಕ ಖಾಯಂ ನೋಂದಣಿ ಸಂಖ್ಯೆ ನೀಡುವುದು. ಈ ಸಂಬಂಧ, ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ಪ್ರತ್ಯೇಕ ಖಾಯಂ ನೋಂದಣಿ ಸಂಖ್ಯೆ ನೀಡಲು ಕ್ರಮವಹಿಸುವುದು.
2. ಸದರಿ ವಿಷಯದ ಬಗ್ಗೆ ಡೀನ್ (ಶೈಕ್ಷಣಿಕ), ಕುಲಸಚಿವರು (ಪರೀಕ್ಷಾಂಗ) ಕುಲಸಚಿವ ಮತ್ತು ನಿರ್ದೇಶಕರು ಸಿಐಕ್ಯೂಎ ರವರು ವಿವರವಾಗಿ ಪರಿಶೀಲಿಸಿ ಅಭಿಪ್ರಾಯ ನೀಡುವುದು.
3. ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ಸದರಿ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣ ಪತ್ರ ನೀಡುವ ಬಗ್ಗೆ ಕಾನೂನು ಸಲಹೆ ಪಡೆಯುವುದು.

******

ಅಂತಿಮವಾಗಿ 26ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಕುಲಸಚಿವ (ಪರೀಕ್ಷಾಂಗ) ರವರು ವಂದನಾರ್ಪಣೆಯನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು